# ಮಂಗಳೂರು ಗಲಭೆ ಜೋಡಿ ತನಿಖೆ!

## ಸಿಐಡಿ ಜತೆ ಮ್ಯಾಜಿಸ್ಟೀರಿಯಲ್ ತನಿಖೆಗೂ ಆದೇಶಿಸಿದ ಸಿಎಂ ಬಿಎಸ್‌ವೈ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಮಂಗಳೂರಿನಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ ವಿರೋಧಿ ಪ್ರತಿಭಟನೆ ವೇಳೆ ನಡೆದಿದ್ದ ಗೋಲಿಬಾರ್ ಪ್ರಕರಣವನ್ನು ಹಾಲಿ ನ್ಯಾಯಾಧೀಶರಿಂದಲೇ ತನಿಖೆ ನಡೆಸಬೇಕೆಂದು ಕಾಂಗ್ರೆಸ್ ಒತ್ತಾಯಿಸುತ್ತಿದ್ದರೂ ಮುಖ್ಯಮಂತ್ರಿ ಯಡಿಯೂರಪ್ಪ ಮ್ಯಾಜಿಸ್ಟೀರಿಯಲ್ ತನಿಖೆಗೆ ಆದೇಶಿಸಿದ್ದಾರೆ. ಇದರ ಜತೆಯಲ್ಲೇ ಸಿಐಡಿ ತನಿಖೆಯೂ ನಡೆಯಲಿದೆ. ಭಾನುವಾರ ಮತ್ತು ಸೋಮವಾರ ಗೃಹ ಸಚಿವರು, ಪೊಲೀಸ್ ಅಧಿಕಾರಿಗಳ ಜತೆ ಚರ್ಚಿಸಿದ ಸಿಎಂ, ಎಸ್ಐಟಿ, ನ್ಯಾಯಾಂಗ, ಸಿಐಡಿ ತನಿಖೆಯ ಸಾಧ್ಯಾಸಾಧ್ಯತೆ ಕುರಿತು ವಿಚಾರ ವಿನಿಮಯ ನಡೆಸಿದ ಬಳಿಕ ಮ್ಯಾಜಿಸ್ಟೀರಿಯಲ್ ತನಿಖೆ ಹೊಣೆಯನ್ನು ಉಡುಪಿ ಜಿಲ್ಲಾಧಿಕಾರಿಗೆ ವಹಿಸಿ ಮೂರು ತಿಂಗಳ ಕಾಲಾವಕಾಶ ನೀಡಿದ್ದಾರೆ.



ಮಂಗಳೂರು ಗಲಭೆ ಪ್ರಕರಣವನ್ನು ಏಕಕಾಲಕ್ಕೆ ಸಿಐಡಿ, ಮ್ಯಾಜಿಸ್ಟೀರಿಯಲ್ ತನಿಖೆಗೆ ಆದೇಶಿಸಲಾಗಿದೆ.
| ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ

**ಕಾಂಗ್ರೆಸ್ ಒತ್ತಾಯ:** ಗೋಲಿಬಾರ್ ಸಂದರ್ಭದಲ್ಲಿ ಫೈರಿಂಗ್ ಆಗಿದ್ದ ಪೊಲೀಸ್ ಸಿಬ್ಬಂದಿ ಆಡಿದ ಮಾತುಗಳಿರುವ ವಿಡಿಯೋ ಮುಂದಿಟ್ಟುಕೊಂಡೇ ಕಾಂಗ್ರೆಸ್ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸಬೇಕೆಂದು ಒತ್ತಾಯಿಸಿತ್ತು. ಎಸ್ಐಟಿ, ಸಿಐಡಿ ತನಿಖೆಯಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಬಹುದಾದ ಸಾಧ್ಯತೆ ಹೆಚ್ಚಿರುವುದರಿಂದ ನ್ಯಾಯಾಂಗ ತನಿಖೆಯಾಗಬೇಕೆಂಬುದು ಕಾಂಗ್ರೆಸ್ಸಿಗರ ಆಗ್ರಹ. ಆರಂಭದಲ್ಲಿ ಸಿಎಂ ಯಡಿಯೂರಪ್ಪ ಕೂಡ ಸಿಐಡಿ ತನಿಖೆಯೇ ಸಾಕೆಂದು ಸಮರ್ಥಿಸಿಕೊಂಡಿದ್ದರು. 'ಕಾಂಗ್ರೆಸ್‌ನವರಿಗೆ ಸರ್ಕಾರದ ವಿರುದ್ಧ ಮಾತನಾಡಲು ಬೇರೆ ವಿಷಯವಿಲ್ಲ. ಈ ಕಾರಣಕ್ಕೆ ವಿವಾದ ಮಾಡುತ್ತಿದ್ದಾರೆ' ಎಂದಿದ್ದರು.

● ಪುಟ 2



### ಸರ್ಕಾರದ ವಾದವೇನು

■ ಪರಿಸ್ಥಿತಿ ನಿಯಂತ್ರಿಸಲು ಗೋಲಿಬಾರ್ ಅನಿವಾರ್ಯವಾಗಿತ್ತು

■ ಗೋಲಿಬಾರ್ ಬೇಡವಾಗಿತ್ತಾದರೂ ಸ್ವಯಂ ರಕ್ಷಣೆಗೆ ಕಠಿಣ ನಿಲುವು

■ ತನಿಖೆ ಕೋರಿಕೆ ಒತ್ತಾಯದಲ್ಲಿ ತಪ್ಪಿಲ್ಲ, ಸಿಐಡಿ ತನಿಖೆ ಮೂಲಕ ಸ್ಪಷ್ಟತೆ ಬರಲಿದೆ

### ಪ್ರತಿಪಕ್ಷಗಳ ಬೇಡಿಕೆ?

■ ಸಿಐಡಿಯಿಂದ ತನಿಖೆಯಾದರೆ ವಾಸ್ತವಾಂಶ ಹೊರ ಬರುವುದು ಅನುಮಾನ

■ ಗೋಲಿಬಾರ್ ಅನಿವಾರ್ಯವಾಗಿರಲಿಲ್ಲ, ನೈಜ ಉದ್ದೇಶ ಬಯಲಿಗೆ ಬರಬೇಕಿದೆ

■ ನ್ಯಾಯಾಂಗ ತನಿಖೆಯಾದಲ್ಲಿ ಮಾತ್ರ ಸತ್ಯಾಂಶ ಗೊತ್ತಾಗಲಿದೆ

### ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಶಕ್ತಿಪ್ರದರ್ಶನ

ಪೌರತ್ವ ಕಾಯ್ದೆ ಪರವಾಗಿ ಸೋಮವಾರ ಬಂಗಾಳದಲ್ಲಿ ಬಿಜೆಪಿಯ ಬಲ ಪ್ರದರ್ಶನ ನಡೆಯಿತು. ಬಿಜೆಪಿ ರಾಷ್ಟ್ರೀಯ ಕಾರ್ಯಾಧ್ಯಕ್ಷ ಜೆ.ಪಿ. ನಡ್ಡಾ ನೇತೃತ್ವದಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಸಾವಿರಾರು ಕಾರ್ಯಕರ್ತರು ಭಾಗವಹಿಸಿ ಕಾಯ್ದೆಗೆ ಬೆಂಬಲ ಸೂಚಿಸಿದರು. ಮತ್ತೊಂದೆಡೆ ಸಿಎಎ, ಎನ್ಆರ್‌ಸಿ ವಿರೋಧಿ ಜಾಹೀರಾತುಗಳನ್ನು ತೆರವುಗೊಳಿಸುವಂತೆ ಕೋಲ್ಕತ ಹೈಕೋರ್ಟ್ ಸೋಮವಾರ ಪಶ್ಚಿಮ ಬಂಗಾಳ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಇದರಿಂದಾಗಿ ಸಿಎಂ ಮಮತಾ ಬ್ಯಾನರ್ಜಿಗೆ ಮುಖಭಂಗವಾದಂತಾಗಿದೆ. ರಾಷ್ಟ್ರ ರಾಜಧಾನಿ ದೆಹಲಿಯ ಗಾಂಧೀಜಿ ಸಮಾಧಿ ರಾಜ್‌ಘಾಟ್‌ನಲ್ಲಿ ಕಾಂಗ್ರೆಸ್ ಏಕತೆಗಾಗಿ ಸತ್ಯಾಗ್ರಹ ನಡೆಸಿತು.

● ವಿವರ ಪುಟ 3

# ಮಂಗಳೂರು ಗಲಭೆ ಜೋಡಿ ತನಿಖೆ!

ಮೊದಲನೇ ಪುಟದಿಂದ

ಸಿಐಡಿ ತನಿಖೆ ಬಗ್ಗೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, 'ನ್ಯಾಯ ಕೇಳುವ ಹೋರಾಟದಲ್ಲಿ ನಾನಿದ್ದೇನೆ. ಗೋಲಿಬಾರ್ ಘಟನೆಯ ಸತ್ಯಾಂಶ ಹೊರ ಬರಬೇಕಿದ್ದರೆ ಹಾಲಿ ನ್ಯಾಯಾಧೀಶರಿಂದಲೇ ತನಿಖೆ ಆಗಬೇಕು' ಎಂದಿದ್ದಾರೆ. ಮಂಗಳೂರಿನಲ್ಲಿ ನಡೆದ ಪೊಲೀಸ್ ದೌರ್ಜನ್ಯ ಹಾಗೂ ಅತಿರೇಕ ಕುರಿತು ಸಿಐಡಿ ತನಿಖೆಯಿಂದಷ್ಟೇ ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಒದಗಿಸಲು ಸಾಧ್ಯವಿಲ್ಲ ಎಂಬುದು ಅವರ ಅಭಿಪ್ರಾಯ.

**ಏನಿದು ಪ್ರಕರಣ?:** ದೇಶದ ಹಲವೆಡೆ ನಡೆಯುತ್ತಿರುವ ಪೌರತ್ವ ತಿದ್ದುಪಡಿ ಕಾಯ್ದೆ ವಿರೋಧಿ ಪ್ರತಿಭಟನೆ ಕರ್ನಾಟಕಕ್ಕೂ ವಿಸ್ತರಿಸಿ ಡಿ.19ರಂದು ಮಂಗಳೂರಿನಲ್ಲಿ ಹಿಂಸಾಚಾರ ಭುಗಿಲೆದ್ದಿತ್ತು. ನಿಷೇಧಾಜ್ಞೆ ನಡುವೆಯೂ ನಡೆಯುತ್ತಿದ್ದ ಪ್ರತಿಭಟನೆಯಲ್ಲಿ ಹಿಂಸಾಚಾರ ಕೈಮೀರುವ ಹಂತದಲ್ಲಿ ಪೊಲೀಸರು ಅನಿವಾರ್ಯವಾಗಿ ಗುಂಡು ಹಾರಿಸಿದಾಗ ಇಬ್ಬರು ಮೃತಪಟ್ಟಿದ್ದರು. ಸರ್ಕಾರ ಗೋಲಿಬಾರ್ ಸಮರ್ಥಿಸಿಕೊಂಡರೂ ಮುಸ್ಲಿಂ ಸಂಘಟನೆಗಳು ಹಾಗೂ ಕಾಂಗ್ರೆಸ್ ನಾಯಕರು ತನಿಖೆಗೆ ಆಗ್ರಹಿಸಿದ್ದರು. ಮೃತರ ಕುಟುಂಬ ಸದಸ್ಯರೂ ಇದಕ್ಕೆ ದನಿಗೂಡಿಸಿದ್ದರು.

**ಮುಸುಕು ಸರಿಸಲು ಯತ್ನ:** ಮಂಗಳೂರಿನಲ್ಲಿ ನಡೆದ ಗಲಭೆಗೆ ಕೇರಳದಿಂದ ಬಂದವರ ಕುಮ್ಮಕ್ಕು ಇದೆ ಎಂದು ಸರ್ಕಾರ ಬಲವಾಗಿ ಪ್ರತಿಪಾದಿಸಿದೆ. ಮಂಗಳೂರು ಪೊಲೀಸರೂ ಸಹ ಇದೇ ವಿಚಾರವನ್ನು ಪುನರುಚ್ಚರಿಸಿದ್ದಾರೆ. ಸ್ಥಳೀಯರಿಂದ ಗಲಭೆ ನಡೆಯುವ ಯಾವುದೇ ಸಾಧ್ಯತೆ ಇರಲಿಲ್ಲ. ಹೊರಗಿನಿಂದ ಬಂದವರು ಕುಮ್ಮಕ್ಕು ನೀಡಿ ಪ್ರಚೋದಿಸಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದೀಗ ಗಲಭೆಯಲ್ಲಿ ಕಾಣಿಸಿಕೊಂಡಿದ್ದ ಮುಸುಕುಧಾರಿಗಳ ಬೇಟೆಗೆ ಸರ್ಕಾರ ವಿಶೇಷ ಆಸಕ್ತಿ ತೋರಿದೆ.

### ಗೃಹ ಸಚಿವರ ತಲೆದಂಡಕ್ಕೆ ಪಟ್ಟು

ಗೋಲಿಬಾರ್ ಪ್ರಕರಣ ಸಂಬಂಧ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರ ರಾಜೀನಾಮೆ ಪಡೆಯಬೇಕೆಂದು ಕಾಂಗ್ರೆಸ್ ಪಟ್ಟುಹಿಡಿದಿದೆ. ಈ ಘಟನೆ ಮೂಲಕ ಸರ್ಕಾರ ಹಣಿಯಲು ನಿರ್ಧರಿಸಿರುವ ಕೈ ನಾಯಕರು, ಗೃಹ ಸಚಿವರನ್ನು ಒತ್ತಡಕ್ಕೆ ಸಿಲುಕಿಸುವ ತಂತ್ರ ಪ್ರಯೋಗಿಸಿದ್ದಾರೆ. ಮುಂದಿನ ಅಧಿವೇಶನದಲ್ಲೂ ರಾಜೀನಾಮೆಗೆ ಒತ್ತಾಯಿಸಿ ಹೋರಾಟಕ್ಕಿಳಿಯುವ ಕುರಿತೂ ಚರ್ಚೆ ನಡೆದಿದೆ.

4